

## ಮನದ ಭಾಷೆಯ ‘ಚೆನ್ನುಡಿ’

‘ನಾವಾಡುವ ನುಡಿಯೇ ಕನ್ನಡ ನುಡಿ’ ಅಂತ ಅಣ್ಣಾವ್ರು ಹಾಡಿದಾಗಲೆಲ್ಲ, ನಮ್ಮ ಮನೆಯ ನುಡಿ ನಮ್ಮ ಮನಸಿಗೆ ಬರುತ್ತದೆ. ಕನ್ನಡದ ವೈವಿಧ್ಯಮಯ ಧಾಟಿಯ ಮಾತುಗಳಲ್ಲಿ ಕನ್ನಡ ನುಡಿ ಸಿರಿವಂತಿಕೆ ಈ ‘ಚೆನ್ನುಡಿ’ ಸರಣಿಯಲ್ಲಿ ಪ್ರಕಟವಾಗಲಿದೆ. ಕನ್ನಡ ಭಾಷೆಯ ಧ್ವನಿ ಕೇಳಲು **ಪ್ರಜಾವಾಣಿಯ ಕನ್ನಡ ಧ್ವನಿ ಪಾಡ್‌ಕಾಸ್ಟ್** ಕೇಳಿ. ಪ್ರತಿ ಗುರುವಾರ ಬೆಳಗ್ಗೆ 9 ಗಂಟೆಗೆ ಈ ಸರಣಿಯ ಲೇಖನದ ಓದು ನಿಮ್ಮ ಕೇಳ್ವಿಕೆಗೆ ಪ್ರಸಾರವಾಗಲಿದೆ.

ಇವತ್ತಿಗೂ ನಿನ್ನೆ ಮೊನ್ನೆ ನಡೆದ ಘಟನೆಗಳ ಹಾಂಗ ಕಣ್ಮುಂದ ಸುಳದಾಡತಾವ ನೋಡ್ರೀ...

ಶ್ರಾವಣ ಬಂದ್ರ ಉಳವಿ ಬಸಪ್ಪನ ಜಾತ್ರಿ... ಕಡೆ ಸೋಮವಾರ ಮಾತ್ರ ಸಾಲಿಗೆ (ಶಾಲೆಗೆ) ಸೂಟಿ ಇರುತಿತ್ತು. ಆದ್ರ ನಾವು ಪ್ರತಿ ಶ್ರಾವಣ ಸೋಮವಾರ ನಾಕು ಪಿರಿಯಡ್ ಆದ ಕೂಡಲೇ ಏನಾರ ಒಂದು ಕುಂಟು ನೆಪಾ ಅಕ್ಕೋರಿಗೆ ಹೇಳಿ, ಪಾಟೀಚೀಲಾ ಬಗಲಿಗೆ ಏರಿಸಿದವ್ರ ಸಾಲ್ಯಾಗಿಂದ ರಫೂ ಚಕ್ಕರ್ ಆಗ್ತಿದ್ವಿ...

ಹಿಂಗ ಒಂದ ಸೋಮವಾರ ಮಧ್ಯಾಹ್ನ ಊಟಕ್ಕೆ ಬಿಟ್ಟಾಗ ಸಪ್ಪಗ ಮಾರೀ ಮಾಡ್ಕೊಂಡು ಟೀಚರ್ ಮುಂದ ನಿಂತ್ಕೊಂಡು ‘ನಂಗ ಭಾಳ ಹೊಟ್ಟೆ ನೋಯಾಕ ಹತ್ತೇತ್ರಿ...’ ಅಂದೆ. ನಮ್ಮ ಅಕ್ಕೋರಿಗೂ ಗೊತ್ತಿತ್ತು ನಾ ಸುಳ್ಳ ಹೇಳಾಕ ಹತ್ತೀನಿ ಅಂತ. ಆದ್ರೂ ಅದ್ನ ತೋರಿಸಿಕೊಳ್ಳದ ‘ಹೌದ... ಶ್ರಾವಣ ಮಾಸದಾಗ ನಿನಗ ಪ್ರತಿ ಸೋಮವಾರ ಏನಾರ ಒಂದು ಆಕ್ಕೇತಿ... ಅಡ್ಡಿಯಿಲ್ಲ ಮನಿಗೆ ಹೋಗಿ ಆರಾಮ ತಗೋ... ನೋವು ಹೆಚ್ಚಾದ್ರ ಡಾಕ್ಟರ್ ಹತ್ತಿರ ತೋರಿಸಿಕೊಂಡು ಬಾ’ ಅಂದ್ರು.

ಅವ್ರು ಅಷ್ಟ ಹೇಳಿದ್ದ ತಡಾ... ಬಡಾ ಬಡಾ ಪಾಟೀಚೀಲಾ ತಗೊಂಡು ರೊಯ್ಯಂತ ಓಡಿ ಸಾಲಿ ಕಾಂಪೌಂಡ್ ದಾಟಿಯೇ ಬಿಡತಿದ್ವಿ. ಮನಿ ಸ್ವಲ್ಪ ದೂರಾನ ಇತ್ತು... ಆದ್ರ ಜಾತ್ರೆಗೆ ಹೋಗು ಉಬ್ಬಿನಾಗ ರೊಯ್ಯಂತ ರಾಕೆಟ್ ನಂಗ ಓಡಿಕೊಂತಾ ಮನಿ ಮುಟ್ಟೆ ಬಿಡತಿದ್ವಿ... ಕೈಕಾಲಮಕಾ ತೊಳಕೊಂಡು ಯುನಿಫಾರ್ಮ್ ತಗದು ಬ್ಯಾರೆ ಅಂಗಿ ಹಾಕ್ಕೊಂಡು ಅವ್ವನ ಕೈ ಹಿಡಕೊಂಡು ಉಳವಿಬಸಪ್ಪನ ಗುಡ್ಡಾ ಏರಿ ಜಾತ್ರೆಗೆ ಬಂದ್ವಿ ನಾನು ನನ್ನ ತಮ್ಮ ಮತ್ತ ನನ್ನ ಗೆಳತಿ... ಒಬ್ಬರ ಕೈ ಒಬ್ಬರು ಗಟ್ಯಾಗಿ ಹಿಡ್ಕೊಂಡು ಉದ್ದಕ ಉಗಿಬಂಡಿ ಹಂಗ ಆಗಿ ನಡ್ಕೊಂಡು ಗುಡಿ ಮುಟ್ಟಿದ್ವಿ.

ದೇವರಿಗೆ ಹಣಕಾಯಿ ಮಾಡಿಸ್ಕೊಂಡು ಹೊರಗ ಬಂದು ತೊಟ್ಟಿಲು ಚಕ್ರದಾಗ ಕುಂತು ಆಟ ಆಡಿದ್ವಿ. ಆಮ್ಯಾಗ ಅವ್ವ ಕೊಡಿಸಿದ ಬಿಸಿಬಿಸಿ ಮಿರ್ಚಿ ಭಜಿ, ಚುರುಮುರಿ ತಿನಕೊಂತ ಕುಂತಿದ್ವಿ. ‘ಮಿರ್ಚಿ ಭಜಿ ತಿನ್ನುವಷ್ಟು ಹೊಟ್ಟೆ ನೋವು ಇಷ್ಟ ಲಗೂನ ಗುಣಾ ಆತೇನ ಇಂದ್ರಾ ನಿಂದು’ ಅನ್ನೂ ಧ್ವನಿ ಕೇಳಿ ಸರಕ್ಕನ ಹೊರಳಿ ನೋಡಿದ್ರ ನಮ್ಮ ಅಕ್ಕೋರು ಎದುರಿಗೆ ನಿಂತಾರು... ನನ್ನ ಬಾಯಾಗ ಅರ್ಧಾ ತಿಂದ ಬಿಸಿ ಬಿಸಿ ಮಿರ್ಚಿಭಜಿ ಇತ್ತು. ಇತ್ತಾಗ ಒಳಗ ನುಂಗಾಕೂ ಆಗ್ದೆ, ಅತ್ತಾಗ ಉಗುಳಾಕು ಆಗ್ದೆ ದಂಗು ಬಡದು, ಗರಾ ಹೊಡೆದು ನಿಂತುಬಿಟ್ಟೆ... ಅಷ್ಟೊತ್ತಿನಾಗ ನಮ್ಮ ಅಕ್ಕೋರು ಅಲ್ಲಿಗೆ ಬರ್ತಾರು ಅನ್ನೋ ಕಲ್ಪನಾ ಕೂಡ ಇಲ್ಲದ ನಾನು ಗಾಬರಿಯಾಗಿ ಏನೋ ಹೇಳಾಕ ಅಂತ ಬಾಯಿ ತೆಗೆದ ಕೂಡ್ಲೇ ನೆತ್ತಿಗೆ ಹತ್ತಿ ಒಂದ ಸಮನ ಕೆಮ್ಮು ಬಂದು ಬಿಕ್ಕು ಹತ್ತಿ ಬಿಟ್ಟು... ಕಣ್ಣಾಗ ನೀರು ಸುರಿಯಾಕ ಹತ್ತಿದ್ವ ನೋಡ್ರೀ... ಸುಳ್ಳ ಬ್ಯಾರೆ ಹೇಳಿ ಸಾಲಿ ತಪ್ಪಿಸಿ ಬಂದಿದ್ದೆ ನಾನು...

ನನ್ನ ಪರಿಸ್ಥಿತಿ ನೋಡಿ ಕಡೀಕ್ ಅಕ್ಕೋರು ತಮ್ಮ ಕೈಯಿಂದ ನನ್ನ ನೆತ್ತಿ ಮ್ಯಾಲ ಸಾವಕಾಶ ಟಪಾ ಟಪಾ ಅಂತ ತಟ್ಟಿ ನನಗ ನೀರು ಕುಡಿಸಿ, ‘ನಾಳೆ ಸರಿ ವ್ಯಾಳೆಕ ಸಾಲಿಗೆ ಬರ್ರಿ... ಈಗ ಚೆಂದಾಗಿ ಜಾತ್ರಿ ಮಾಡ್ರಿ...’ ಅಂತ ಅವ್ವನ ಜೊತಿ ಸ್ವಲ್ಪ ಮಾತಾಡಿ ನಕ್ಕು ಹೋದ್ರು.

ಸುಮಾರು 50 ವರ್ಷಗಳ ಹಿಂದಿನ ಮಾತು...

ಬ್ಯಾಡಗಿಯಿಂದ ಮೈಲಾರ ಜಾತ್ರೆಗೆ ಹೋಗುವಾಗಿನ ಚಿತ್ರಣ ಇಂದಿಗೂ ನನ್ನ ಕಣ್ಮುಂದೆ ಇದೆ. ಕೊಲ್ಹಾರಿ ಚಕ್ಕಡಿಗಳ ಸಿಂಗಾರ... ಸಾಲು ಸಾಲು ಚಕ್ಕಡಿಗಳು. ಚಕ್ಕಡಿಯ ಮೇಲೆ ಕಾಮನಬಿಲ್ಲಿನಂತೆ ಬಾಗಿಸಿ ಕಟ್ಟಿಸಿದ ಬಿದಿರಿನ ಗಳಗಳ ಮೇಲೆ ಬಣ್ಣದ ಗುಡಾರ ಹಾಸಿ ಕಟ್ಟಿರುತ್ತಾರೆ... ಒಳಗಡೆ ಪುಟ್ಟದೊಂದು ಬೆಚ್ಚನೆಯ ಗೂಡು ಸಿದ್ಧವಾಗಿರುತ್ತಿತ್ತು. ಎತ್ತಿನ ಕೋಡುಗಳಿಗೆ ಬಣ್ಣ ಬಳಿದು, ರಿಬ್ಬನ್ ಕಟ್ಟುತ್ತಿದ್ದರು. ಕೊರಳಲ್ಲಿ ಘಂಟೆ ಕಟ್ಟಿ, ಎತ್ತಿನ ಡುಬ್ಬದ ಮೇಲೆ ದಪ್ಪ ಬಟ್ಟೆಯ

